## ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ತ್ರೈವಾರ್ಷಿಕ ಚುನಾವಣೆ – 2016

## ಎಲ್ಲಾ ಅಭ್ಯರ್ಥಿಗಳ ಮತ್ತು ದಾನಿ ಸದಸ್ಯರ ಗಮನಕ್ಕೆ ಮತ್ತು ಆತ್ಮಾವಲೋಕನಕ್ಕೆ

ಅಭ್ಯರ್ಥಿಗಳ ಹೆಸರುಗಳನ್ನು ಅಕಾರಾದಿ (ವರ್ಣಮಾಲೆಯ) ಕ್ರಮದಲ್ಲಿ ಜೋಡಿಸಿರುವುದರ ಬಗ್ಗೆ ಸಾಕಷ್ಟು ಗೊಂದಲ ಮತ್ತು ಅತೃಪ್ತಿ ಎದ್ದಿರುವುದು ನನ್ನ ಗಮನಕ್ಕೆ ಬಂದಿದೆ. ಈ ಸಂದರ್ಭದಲ್ಲಿ ಸ್ಪಷ್ಟೀಕರಣದ ಜೊತೆ ನನ್ನ ನಿಲುವಿನ ಸಮರ್ಥನೆಯನ್ನು ನೀಡುತ್ತೇನೆ.

1. ಇಂಗ್ಲಿಷ್ ವರ್ಣಮಾಲೆಯ ಕ್ರಮದಲ್ಲಿ ಹೆಸರುಗಳನ್ನು ವ್ಯವಸ್ಥಿತಗೊಳಿಸಲಾಗಿದೆ.

2. ಅಭ್ಯರ್ಥಿಗಳು ತಮ್ಮ ಹೆಸರುಗಳನ್ನು ನಾಮಪತ್ರಗಳಲ್ಲಿ ಬರೆದಿರುವ ಕ್ರಮದಲ್ಲಿ ಜೋಡಿಸಲಾಗಿದೆ. ನಾನಾಗಿ ಯಾವುದೇ ಬದಲಾವಣೆಯನ್ನು ಮಾಡಿಲ್ಲ. ಅದೇ ಕ್ರಮದಲ್ಲಿ ಹೆಸರುಗಳ ಜೋಡಣೆಯಾಗಿವೆ. ಹೆಸರುಗಳ ಕ್ರಮಕ್ಕೆ ಅಭ್ಯರ್ಥಿಗಳಷ್ಟೇ ಹೊಣೆಗಾರರು.

3. ಚುನಾವಣೆಯನ್ನು ನಡೆಸಬೇಕಾದ ಬಗ್ಗೆ ವಿವರಗಳನ್ನುಳ್ಳ ಕೈಪಿಡಿ ಲಭ್ಯವಿಲ್ಲ.

4. ಸಾರ್ವತ್ರಿಕ ಚುನಾವಣೆಯ ನಿಯಮಗಳಿಗೆ ಅನುಗುಣವಾಗಿ ಚುನಾವಣಾಧಿಕಾರಿಯು ಚುನಾವಣೆಯನ್ನು ಎಲ್ಲಾ ಹಂತಗಳಲ್ಲಿ ನಡೆಸಬೇಕು ಎಂಬ ಸೂಚನೆ ಎಲ್ಲಿಯೂ ಇಲ್ಲ. ಇದ್ದರೂ ಸಹ ಕೆಳಗೆ ಕೊಟ್ಟಿರುವ ಕಾರಣಗಳಿಂದಾಗಿ ಚುನಾವಣಾಧಿಕಾರಿ ಅನುಸರಿಸಬೇಕು ಎಂದು ಒತ್ತಾಯಿಸುವುದಕ್ಕೆ ಸಾಧ್ಯವಿಲ್ಲ.

    ಎ. ಮತದಾರರ ವಿಳಾಸಕ್ಕೆ ಮತಪತ್ರವನ್ನು ಅಂಚೆಯ ಮೂಲಕ ಕಳುಹಿಸುವ ಪದ್ಧತಿ ಸಾರ್ವತ್ರಿಕ ಚುನಾವಣಾ ನಿಯಮಗಳಿಗೆ ವಿರುದ್ಧವಾಗಿದೆ. ಆದರೆ ನೀವು ಈ ಪದ್ಧತಿಯನ್ನು ಅನುಸರಿಸುತ್ತಿದ್ದೀರಿ.

    ಬಿ. ನಾಮಪತ್ರವನ್ನು ಸಲ್ಲಿಸುವಾಗ ಉಮೇದುವಾರರು, ಸೂಚಿಸುವವರು ಮತ್ತು ಅನುಮೋದಿಸುವವರು ಚುನಾವಣಾಧಿಕಾರಿಯವರ ಎದುರಿನಲ್ಲಿ ಸಲ್ಲಿಸಬೇಕು. ಅಂಚೆಯ ಮೂಲಕ ಕಳುಹಿಸುವುದು ಊಹೆಗೂ ಮೀರಿದ್ದು, ಆದರೆ ನಿಮ್ಮಲ್ಲಿ ಕೆಲವರು ಈ ಪದ್ಧತಿಯನ್ನು ಅನುಸರಿಸುತ್ತಿದ್ದೀರಿ.

–2–

ಸಿ. ವಾಸಸ್ಥಳದ ವಿಳಾಸವಿರುವ ಗುರುತಿನ ಚೀಟಿ ಇಲ್ಲದೆ ಮತದಾನ ಮಾಡುವುದಕ್ಕೆ ಸಾರ್ವತ್ರಿಕ ಚುನಾವಣೆಯಲ್ಲಿ ಸಾಧ್ಯವಿಲ್ಲ. ಆದರೆ ನೀವು ಇದನ್ನು ಅನುಸರಿಸುತ್ತಿದ್ದೀರಿ.

ಡಿ. ಸರ್ಕಾರದಿಂದ ಅನುದಾನವನ್ನು ಪಡೆಯುವ ಪ್ರತಿಷ್ಠಿತ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತು ಹೋಬಳಿ ಮಟ್ಟದಲ್ಲಿ ಮತಗಟ್ಟೆಗಳನ್ನು 2016ರ ಚುನಾವಣೆಯಲ್ಲಿ ತೆರೆದಿತ್ತು. ಆದರೆ ಅಷ್ಟೇ ಪ್ರತಿಷ್ಠಿತ ಸಂಸ್ಥೆಯಾದ ವಿಜ್ಞಾನ ಪರಿಷತ್ತು ಒಂದೇ ಒಂದು ಮತಗಟ್ಟೆಯನ್ನು ತೆರೆದಿಲ್ಲದಿರುವುದು ವಿಷಾದನೀಯ. ಚುನಾವಣೆಯ ಮುಖ್ಯ ಧ್ಯೇಯವಾದ “ರಹಸ್ಯ ಮತದಾನ” ದ ಪರಿಕಲ್ಪನೆಯು ಪೂರ್ಣವಾಗಿ ಛಿದ್ರವಾಗಿದೆ.

ಆತ್ಮೀಯ ಗೆಳೆಯರೆ,

ತಮ್ಮಲ್ಲಿ ನನ್ನ ಮನವಿ. ನಿಮ್ಮ ನಿಲುವನ್ನು ಮತ್ತು ರೂಪಿಸಿರುವ ಬೈಲಾಗಳನ್ನು ನಾನು ಪ್ರಶ್ನಿಸುವುದೂ ಇಲ್ಲ; ಪ್ರಶ್ನಿಸುವ ಅಧಿಕಾರವೂ ಇಲ್ಲ. ಹಾಗೆಯೇ, ನನ್ನ ನಿರ್ಧಾರವನ್ನು ಪ್ರಶ್ನಿಸುವ ಅಧಿಕಾರ ನಿಮಗೂ ಇಲ್ಲ. ನಿಮ್ಮ ವಿವೇಚನೆಗೆ ಸರಿ ಎಂದು ಕಂಡುಬಂದ ರೀತಿಯಲ್ಲಿ ಚುನಾವಣೆಯ ವಿಧಾನವನ್ನು ರೂಪಿಸಿದ್ದೀರಿ. ನಾನು ನನ್ನ ವಿವೇಚನೆಗೆ ಸರಿ ಎಂದು ಕಂಡುಬಂದ ರೀತಿಯಲ್ಲಿ ನನ್ನ ಕಾರ್ಯವಿಧಾನವನ್ನು ರೂಪಿಸಿಕೊಂಡಿದ್ದೇನೆ. ನೀವು ನಿಯಮಗಳನ್ನು ಉಲ್ಲಂಘಿಸಬಹುದು, ಆದರೆ ಚುನಾವಣಾಧಿಕಾರಿ ಉಲ್ಲಂಘಿಸಬಾರದು ಎಂಬುದು ಯಾವ ನ್ಯಾಯ? ಯಾವ ಅಭ್ಯರ್ಥಿಯೂ ನನಗೆ ನಿರ್ದೇಶನವನ್ನು ಅಥವಾ ಸೂಚನೆಯನ್ನು ಕೊಡುವ ಹಾಗಿಲ್ಲ. ಒಂದು ವೇಳೆ ನನ್ನ ನಿರ್ಧಾರವನ್ನು ಪ್ರಶ್ನಿಸಿದರೆ, ಮುಂದಿನ ಆಗು–ಹೋಗುಗಳಿಗೆ ನಾನು ಜವಾಬ್ದಾರನಲ್ಲ. ಈ ವಿಷಯವು ಮುಗಿದ ಅಧ್ಯಾಯ ಎಂದು ತಿಳಿಯತಕ್ಕದ್ದು.

ಯಾವುದೇ ಕಾರಣಕ್ಕೂ ಯಾವ ಅಭ್ಯರ್ಥಿಯು ಚುನಾವಣಾಧಿಕಾರಿಗೆ ಕರೆ ಮಾಡುವ ಹಾಗಿಲ್ಲ. ಆದರೆ ಇ–ಮೇಲ್ ಮುಖಾಂತರ ವ್ಯವಹರಿಸಬಹುದು.

ನೀತಿಸಂಹಿತೆಯ ಜೊತೆಗೆ ಈ ಅಂಶಗಳಿಗೆ ಕಟ್ಟುನಿಟ್ಟಾಗಿ ಎಲ್ಲರೂ ಬದ್ಧರಾಗಿರತಕ್ಕದ್ದು.

ಸಹಿ

(ಎಂ.ಆರ್. ನಂದನ್)
ಚುನಾವಣಾಧಿಕಾರಿ, ಕರಾವಿಪ ತ್ರೈವಾರ್ಷಿಕ ಚುನಾವಣೆ – 2016
ಇ–ಮೇಲ್: nandan.chakrapani@gmail.com